**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ- 577 222, ☎ 08182-246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿ.ದಾ.ಚಿ.ಸಹಾಒ/ಮಾರುಕಟ್ಟೆ/ಟೆಂಡರ್/**3412**/2020-21 **ದಿನಾಂಕ: 24.08.2020**

-: ***ಒಕ್ಕೂಟದ ಸ್ವಂತ ಮಿಲ್ಕ್ ಪಾರ್ಲರ್‌ಗಳನ್ನು ದ್ವೈವಾರ್ಷಿಕ ಅವಧಿಗೆ ಒಕ್ಕೂಟಕ್ಕೆ ಮಾಸಿಕ ಲೈಸೆನ್ಸ್ ಫೀ ಪಾವತಿಸಿ ಪಾರ್ಲರ್ ನಿರ್ವಹಣೆ ಮಾಡಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ*** :-

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ನಂದಿನಿ ಮಿಲ್ಕ್ ಪಾರ್ಲರ್‌ಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರ್ಜಿನ್ ಆಧಾರದ ಮೇಲೆ ಮಾರಾಟ ಮಾಡಿ ಒಕ್ಕೂಟಕ್ಕೆ ಮಾಸಿಕ ಲೈಸೆನ್ಸ್ ಫೀಯನ್ನು ಮತ್ತು ಶೇ.18 ರಷ್ಟು ಜಿ.ಎಸ್.ಟಿ ತೆರಿಗೆಯನ್ನು ಪಾವತಿಸಿ ಪಾರ್ಲರ್ ನಿರ್ವಹಣೆ ಮಾಡಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (ಟೆಕ್ನಿಕಲ್ / ಕಮರ್ಷಿಯಲ್) ದರ ಹೊಂದಿದ ಎರಡು ಪ್ರತ್ಯೇಕ ಟೆಂಡರ್ ಕರೆಯಲಾಗಿದ್ದು ಅರ್ಜಿಯನ್ನು ಸಲ್ಲಿಸಬಹುದಾಗಿದೆ.**

**https://eproc.karnataka.gov.in**

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: 26.08.2020 ರಿಂದ |
| 2 | ಟೆಂಡರ್ ಫಾರಂಗಳನ್ನು ಇ-ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 25.09.2020 ರಂದು ಸಂಜೆ: 17.30 ಗಂಟೆಯವರೆಗೆ |
| 3 | ಟೆಕ್ನಿಕಲ್ ಟೆಂಡರ್ ತೆರೆಯುವ ದಿನ | ದಿನಾಂಕ: 28.09.2020 ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ | ದಿನಾಂಕ: 30.09.2020 ರಂದು ಬೆಳಿಗ್ಗೆ: 11.30 ಗಂಟೆಗೆ |

| ಕ್ರ ಸಂ | ಮಿಲ್ಕ್ ಪಾರ್ಲರ್‌ಗಳ ಹೆಸರು | ಇ.ಎಂ.ಡಿ ವಿವರ | ಭದ್ರತಾ ಠೇವಣಿ |
|---|---|---|---|
| 1 | ಸಿ.ಎನ್.ರಸ್ತೆ ಮಿಲ್ಕ್ ಪಾರ್ಲರ್- ಭದ್ರಾವತಿ | 25,000/- | 1,00,000/- |
| 2 | ಮೆಗ್ಗಾನ್ ಆಸತ್ರೆ ಮಿಲ್ಕ್ ಪಾರ್ಲರ್- ಶಿವಮೊಗ್ಗ | 25,000/- | 1,00,000/- |
| 3 | ಪಟ್ಟಣ ಪಂಚಾಯ್ತಿ ಮಿಲ್ಕ್ ಪಾರ್ಲರ್ - ತೀರ್ಥಹಳ್ಳಿ | 25,000/- | 1,00,000/- |
| 4 | ಗ್ರಾಮ ಪಂಚಾಯ್ತಿ ಮಿಲ್ಕ್ ಪಾರ್ಲರ್ - ಆಗುಂಬೆ | 25,000/- | 50,000/- |
| 5 | ಸಾರ್ವಜನಿಕ ಆಸ್ಪತ್ರೆ ಮಿಲ್ಕ್ ಪಾರ್ಲರ್- ಹಿರಿಯೂರು | 25,000/- | 50,000/- |
| 6 | ದಾವಣಗೆರೆ ಡೈರಿ ಮುಂಭಾಗದ ಮಿಲ್ಕ್ ಪಾರ್ಲರ್ - ದೊಡ್ಡಬಾತಿ | 25,000/- | 1,00,000/- |
| 7 | ಶಿವಕುಮಾರ್ ಸ್ವಾಮಿ ಬಡಾವಣೆ ಮಿಲ್ಕ್ ಪಾರ್ಲರ್ - ದಾವಣಗೆರೆ | 25,000/- | 2,00,000/- |
| 8 | ಪಶು ಆಸ್ಪತ್ರೆ ಮಿಲ್ಕ್ ಪಾರ್ಲರ್ - ಹೊನ್ನಾಳಿ | 25,000/- | 2,00,000/- |
| 9 | ಹೊನ್ನಾಳಿ ಶೀಥಲೀಕರಣ ಕೇಂದ್ರದ ಆವರಣದ ಮಿಲ್ಕ್ ಪಾರ್ಲರ್ - ಹೊನ್ನಾಳಿ | 25,000/- | 50,000/- |
| 10 | ಪಶು ಆಸ್ಪತ್ರೆ ಆವರಣದ ಮಿಲ್ಕ್ ಪಾರ್ಲರ್ - ನ್ಯಾಮತಿ | 25,000/- | 1,00,000/- |
| 11 | ಪಶು ಆಸ್ಪತ್ರೆ ಮಿಲ್ಕ್ ಪಾರ್ಲರ್ - ಸೊರಬ | 25,000/- | 1,00,000/- |
| 12 | ಪಶು ಆಸ್ಪತ್ರೆ ಮಿಲ್ಕ್ ಪಾರ್ಲರ್ - ಮೊಳಕಾಲ್ಮೂರು | 25,000/- | 50,000/- |

**ವಿಶೇಷ ಸೂಚನೆ:- ತೀರ್ಥಹಳ್ಳಿ ಪಟ್ಟಣ ಪಂಚಾಯ್ತಿ ಪಾರ್ಲರ್ ಟೆಂಡರ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರುತ್ತದೆ.**

## ನಿಬಂಧನೆ ಮತ್ತು ಷರತ್ತುಗಳು :-

1. ಇ-ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸಿದ ಅರ್ಜಿದಾರರು ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದು.
2. ಕನಿಷ್ಠ ಇ.ಎಂ.ಡಿ. ರೂ. 25,000/- ಆದರೆ ಮಿಲ್ಕ್ ಪಾರ್ಲರ್‌ಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಮಾವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

ಮುಂದುವರೆದಿದೆ

3. ಪ್ರತಿ ಪಾರ್ಲರ್‌ಗೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಪಾರ್ಲರ್‌ಗೆ ಪ್ರತ್ಯೇಕ ಮಾಸಿಕ ಲೈಸೆನ್ಸಿ ಫೀ ದರ ನಮೂದಿಸುವುದು. ಗರಿಷ್ಠ ದರ ನಮೂದಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಲಾಗುವುದು.

4. ಮಾಸಿಕ ಲೈಸೆನ್ಸಿ ಫೀ ಮತ್ತು ಶೇ.18 ರಷ್ಟು ಜಿ.ಎಸ್.ಟಿ ತೆರಿಗೆಯನ್ನು ಪ್ರತಿ ತಿಂಗಳು 5 ನೇ ತಾರೀಖಿನೊಳಗಾಗಿ ಒಕ್ಕೂಟಕ್ಕೆ ಪಾವತಿಸತಕ್ಕದ್ದು. ಜಿ.ಎಸ್.ಟಿ ತೆರಿಗೆಯು ಸರ್ಕಾರದ ಆದೇಶಾನುಸಾರ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ.

5. ಲೈಸೆನ್ಸಿದಾರರು ಮಿಲ್ಕ್ ಪಾರ್ಲರ್ ಲೈಸೆನ್ಸಿ ಆದೇಶ ಪಡೆದ 1 ತಿಂಗಳೊಳಗಾಗಿ ಜಿ.ಎಸ್.ಟಿ ನೋಂದಣಿ ಮಾಡಿಸಿ ಅದರ ಪ್ರತಿಯನ್ನು ಒಕ್ಕೂಟಕ್ಕೆ ಸಲ್ಲಿಸುವುದು. ತಪ್ಪಿದ್ದಲ್ಲಿ ಲೈಸೆನ್ಸಿಯನ್ನು ರದ್ದುಗೊಳಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6. ಟೆಂಡರ್ ಸ್ವೀಕೃತಿ ಆದೇಶ ಪಡೆದ ನಂತರ ಸೂಚಿತ ಅವಧಿಯೊಳಗೆ (ರೂ.100/- ಛಾಪಾ ಕಾಗದದ ಮೇಲೆ) ಕರಾರು ಒಪ್ಪಂದ ಮಾಡಿಕೊಳ್ಳುವುದು ಹಾಗೂ ನಿಗಧಿಪಡಿಸಿದ ಭದ್ರತಾ ಠೇವಣಿ ಹಣವನ್ನು ಒಕ್ಕೂಟಕ್ಕೆ ಸಂದಾಯ ಮಾಡತಕ್ಕದ್ದು. ಸೂಚಿಸಲಾಗಿರುವ ದಿನಾಂಕಗಳೊಳಗಾಗಿ ವಿಧಿ-ವಿಧಾನಗಳನ್ನು ಪೂರೈಸದಿದ್ದಲ್ಲಿ ಒಪ್ಪಿಗೆಯಾಗಿರುವ ಲೈಸೆನ್ಸಿಯನ್ನು ರದ್ದುಪಡಿಸಿ ಇ.ಎಂ.ಡಿ ಮೊತ್ತವನ್ನು ಒಕ್ಕೂಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7. ಸರಬರಾಜು ಮಾಡಲಾದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊಬಲಗನ್ನು ಒಕ್ಕೂಟಕ್ಕೆ/ ಒಕ್ಕೂಟವು ನಿಗಧಿಪಡಿಸಿದ ಬ್ಯಾಂಕ್‌ಗೆ/ ವಿತರಣಾ ವಾಹನದವರಿಗೆ ಅದೇ ದಿನ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು. ಬಾಕಿ ಉಳಿಸಿಕೊಂಡಲ್ಲಿ ನಿಯಮಾನುಸಾರ ದಂಡ ವಿಧಿಸಲಾಗುವುದು ಹಾಗೂ ಹಾಲು ಮತ್ತು ಹಾಲು ಉತ್ಪನ್ನಗಳ ಮೊತ್ತವನ್ನು ಪಾವತಿಸದಿರುವುದನ್ನು ಟೆಂಡರ್ ನಿಬಂಧನೆ ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಹಾಗೂ ಟೆಂಡರ್ ಲೈಸೆನ್ಸ್‌ನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.

8. ಒಕ್ಕೂಟವು ನಿಗಧಿಪಡಿಸಿದ ಪ್ರಮಾಣದ ಹಾಲನ್ನು ಪ್ರತಿ ದಿನ ಮಾರಾಟ ಮಾಡಬೇಕಾಗುತ್ತದೆ. ತಪ್ಪಿದ್ದಲ್ಲಿ ಲೈಸೆನ್ಸ್ ಗುತ್ತಿಗೆಯನ್ನು ರದ್ದುಪಡಿಸುವುದರ ಜೊತೆಗೆ ಲೈಸೆನ್ಸಿದಾರರು ಪಾವತಿಸಿದ ಪೂರ್ಣ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.

9. ಪಾರ್ಲರ್‌ಗಳಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗೆ ಇ.ಎಸ್.ಐ / ಪಿ.ಎಫ್ ಹಾಗೂ ಯಾವುದೇ ಶಾಸನಬದ್ಧ ಪಾವತಿಗಳಿದ್ದಲ್ಲಿ ಅದಕ್ಕೆ ಲೈಸೆನ್ಸಿದಾರರೇ ಜವಾಬ್ದಾರರು.

10. ಲೈಸೆನ್ಸಿದಾರರು ಯಾವುದೇ ಕಾರಣಕ್ಕೂ ಮಾರಾಟ ಮಳಿಗೆ (ಪಾರ್ಲರ್)ನ್ನು ಬೇರೆಯವರಿಗೆ ವಹಿಸಿಕೊಡುವುದನ್ನು (ಸಬ್‌ಲೀಜ್) ನಿಷೇಧಿಸಿದೆ. ಆದಾಗ್ಯೂ, ಅನಿವಾರ್ಯ ಸಂದರ್ಭದಲ್ಲಿ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರವರ ಪೂರ್ವಾನುಮತಿಯೊಂದಿಗೆ ವಿಧಿವಿಧಾನಗಳನ್ನು ಅನುಸರಿಸಿ ನಿಗಧಿತ ವರ್ಗಾವಣೆ ಶುಲ್ಕ ರೂ.10,000-00ನ್ನು ಒಕ್ಕೂಟಕ್ಕೆ ಪಾವತಿಸಿ ಲೈಸೆನ್ಸಿಯನ್ನು ವರ್ಗಾಯಿಸಿಕೊಳ್ಳಬಹುದಾಗಿರುತ್ತದೆ.

11. ಲೈಸೆನ್ಸಿದಾರರು ಹಾಲು ಮತ್ತು ಹಾಲು ಉತ್ಪನ್ನಗಳನ್ನು ಮಾರಾಟ ಮಾಡಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ನಿಯಮಗಳು 2011 ರ ಪ್ರಕಾರ ಜಿಲ್ಲಾಮಟ್ಟದ ಸರ್ವೇಕ್ಷಣಾಧಿಕಾರಿ ಅಥವಾ ತಾಲ್ಲೂಕು ಮಟ್ಟದಲ್ಲಿ ಆಹಾರ ಸುರಕ್ಷತಾಧಿಕಾರಿ(ಫುಡ್ ಸೇಫ್ಟಿ ಆಫೀಸರ್) ರವರಿಂದ ಅಧಿಕೃತ ಲೈಸೆನ್ಸ್ ನ್ನು ಪಡೆಯಬೇಕು ಹಾಗೂ ನಗರ ಸಭೆ, ನಗರ ಪಾಲಿಕೆ, ಪುರಸಭೆ ಇನ್ನಿತರ ಪ್ರಾಧಿಕರದಿಂದ ಹಾಲಿನ ಪಾರ್ಲರ್ ನಡೆಸಲು ಲೈಸೆನ್ಸಿ ಪಡೆಯತಕ್ಕದ್ದು. ಹಾಗೂ ವೃತ್ತಿ ತೆರಿಗೆ ಲೈಸೆನ್ಸ್‌ನ್ನು ಪಡೆಯತಕ್ಕದ್ದು ಹಾಗೂ ಅವರ ಲೈಸೆನ್ಸಿ ಅವಧಿಗನುಗುಣವಾಗಿ ನವೀಕರಣ ಮಾಡಿಸಿಕೊಳ್ಳತಕ್ಕದ್ದು.

12. ಲೈಸೆನ್ಸಿದಾರರು ಮಾರಾಟ ಮಳಿಗೆ ಹಾಗೂ ತಮಗೆ ಒದಗಿಸಿರುವ ವಸ್ತುಗಳನ್ನು ಉತ್ತಮ ಸ್ಥಿತಿಯಲ್ಲಿ (ಗುತ್ತಿಗೆ: ಲೈಸೆನ್ಸಿ ಪಡೆಯುವ ಸಂದರ್ಭದಲ್ಲಿ ಇದ್ದಂತೆ) ತಮ್ಮ ಗುತ್ತಿಗೆ ಲೈಸೆನ್ಸ್ ಅವಧಿ ಪೂರ್ಣಗೊಂಡ ನಂತರ ಒಕ್ಕೂಟಕ್ಕೆ ಹಿಂದಿರುಗಿಸಬೇಕು. ಮಳಿಗೆ/ ಯಂತ್ರೋಪಕರಣಗಳಿಗೆ ಯಾವುದೇ ರೀತಿಯಲ್ಲಿ ಹಾನಿಯಾಗಿದ್ದಲ್ಲಿ ತತ್ಸಬಂಧ ಮೊತ್ತವನ್ನು ಗುತ್ತಿಗೆದಾರರ ಭದ್ರತಾ ಠೇವಣಿ ಹಣದಿಂದ ಕಠಾಯಿಸಿಕೊಳ್ಳುವ ಅಧಿಕಾರವನ್ನು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಇಂತಹ ಹಾನಿಯ ಮೊತ್ತವು ಹಾಗೂ ಹಾಲು ಮತ್ತು ಹಾಲು ಉತ್ಪನ್ನಗಳ ಮಾರಾಟದ ಬಾಕಿಯ ಮೊತ್ತವು ಲೈಸೆನ್ಸಿದಾರರ ಭದ್ರತಾ ಠೇವಣಿ ಮೊತ್ತಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಮೊತ್ತವನ್ನು ಲೈಸೆನ್ಸಿದಾರರ ಚರಸ್ಥಿರ ಆಸ್ತಿಗಳಿಂದ ವಸೂಲಿ ಮಾಡಿಕೊಳ್ಳುವ ಹಕ್ಕನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಹೊಂದಿರುತ್ತದೆ.

ಮುಂದುವರೆದಿದೆ

13. ಒಕ್ಕೂಟದ ಆಸ್ತಿಗೆ ಬೆಂಕಿ, ಕಳ್ಳತನ, ದರೋಡೆ ಮತ್ತು ಲೂಟಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಲೈಸೆನ್ಸಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಒಕ್ಕೂಟದ ಹೆಸರಿಗೆ ವಿಮೆ ಮಾಡಿಸತಕ್ಕದ್ದು.

14. ಗರಿಷ್ಠ ದರ ನಮೂದಿಸಿದ ಟೆಂಡರ್‌ದಾರರೊಂದಿಗೆ ಮಾತ್ರ ದರ ನಿಷ್ಕರ್ಷೆ ನಡೆಸಲಾಗುವುದು.

15. ಮಳಿಗೆಯ ವಿದ್ಯುಚ್ಛಕ್ತಿ ವೆಚ್ಚ, ನಗರಸಭೆ / ಪುರಸಭೆ ನೀರಿನ ದರ, ಇನ್ನಿತರ ತೆರಿಗೆಗಳನ್ನು ಲೈಸೆನ್ಸಿದಾರರೇ ಪಾವತಿಸುವುದು.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಮಾರುಕಟ್ಟೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,

ದಿನಾಂಕ : 24.08.2020
ಸ್ಥಳ : ಮಾಚೇನಹಳ್ಳಿ